೧	೨	೩
14.	ದಾವಣಗೆರೆ	67.67
15.	ಶಿವಮೊಗ್ಗ	74.86
16.	ಉಡುಪಿ	79.87
17.	ಚಿಕ್ಕಮಗಳೂರು	72.63
18.	ತುಮಕೂರು	67.19
19.	ಕೋಲಾರ	63.14
20.	ಬೆಂಗಳೂರು	83.91
21.	ಬೆಂಗಳೂರು (ಗ್ರಾ)	65.00
22.	ಮಂಡ್ಯ	61.21
23.	ಹಾಸನ	68.75
24.	ದಕ್ಷಿಣ ಕನ್ನಡ	83.47
25.	ಕೊಡಗು	78.17
26.	ಮೈಸೂರು	63.69
27.	ಚಾಮರಾಜನಗರ	51.26

ಇ) ರಾಜ್ಯದಲ್ಲಿ ಮುಂದುವರಿಕೆ ಶಿಕ್ಷಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ರಾಜ್ಯ ಸರ್ಕಾರ ಪ್ರಾಯೋಜಿತ ಸಾಕ್ಷರತಾ ಕಾರ್ಯಕ್ರಮ ಮತ್ತು ತೆರೆದ ಶಾಲೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ರಾಜ್ಯದಲ್ಲಿರುವ ಸರ್ಕಾರಿ ಪಾಲಿಕ್ಲಿನಿಕ್‌ಗಳ ಸಂಖ್ಯೆ

2602 (3016) ರಾಜುಗೌಡ ಜಿ. (ಹನ್ನೂರು) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಎಷ್ಟು ಜಿಲ್ಲೆಗಳಲ್ಲಿ ಪಾಲಿಕ್ಲಿನಿಕ್ ಆರಂಭವಾಗಿದೆ; ಇದರ ಉದ್ದೇಶವೇನು;

ಆ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಈ ಸೌಲಭ್ಯವನ್ನು ವಿಸ್ತರಿಸಲು ಸಾಧ್ಯವೇ?

ಶ್ರೀ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಸರ್ಕಾರಿ ಪಾಲಿಕ್ಲಿನಿಕ್ ಯಾವ ಜಿಲ್ಲೆಯಲ್ಲಿಯೂ ಸಹ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.